ಮೂವರೂ ವಿಶಾಲವಾದ ಬಯಲನ್ನು ದಾಟಿ, ಅವರು ತಂದಿದ್ದ ಪಂಜನ್ನು ಹಿಂದಕ್ಕೆ ಎಸೆದರು. ಹುಲ್ಲು ದಟ್ಟವಾಗಿದ್ದಲ್ಲದೆ ಒಣಗಿಯೂ ಇತ್ತು. ಬೆಂಕಿ ಒಮ್ಮೆಗೇ ಹೊತ್ತಿಕೊಂಡು ಎಲ್ಲೆಡೆ ಹರಡಿ ತನ್ನ ನಾಲಗೆಗಳನ್ನು ಚಾಚಿತು.

ವೀಡಾ ಮತ್ತು ಬುಲ್ಬೈ ಬುಲ್ಬೈ ಸೋದರಿಯರು ಮತ್ತೊಂದು ಪೊದೆಯನ್ನು ದಾಟಿ, ಮತ್ತೊಂದು ಬಯಲನ್ನು ಸೇರಿದರು. ನಂತರ ಮತ್ತೆ ಅವರಿಗೆ ಪೊದೆ, ಬಯಲುಗಳು ಸಿಕ್ಕವು.

ಯೀ (ಸೂರ್ಯ) ನೆತ್ತಿಯ ಮೇಲಿದ್ದ. ಬಿಸಿಲೋ ಬಿಸಿಲು. ಮೂವರಿಗೂ ಬಾಯಾರಿಕೆ ಆಯಿತು. ಆದರೆ, ಬರುವ ಆತುರದಲ್ಲಿ, ಅವರಾರೂ ನೀರನ್ನು ತಂದಿರಲಿಲ್ಲ.

"ನೀರು ಬೇಕು, ನೀರು, ನೀರು," ಬುಲ್ಬೈ ಬುಲ್ಬೈ ಅರಚಿದವು.

"ನೀವೇಕೆ ನೀರು ತರಲಿಲ್ಲ?" ವೀಡಾ ಕೇಳಿದ.

"ನಿನ್ನ ಬಳಿ ಸಾಕಷ್ಟು ನೀರಿದೆ ಎಂದು ನಂಬಿ ಬಂದೆವು. ಅಲ್ಲದೆ ನಾವು ಹೋಗುವುದೆಲ್ಲಾ ತೊರೆಗಳ ಪಕ್ಕದಲ್ಲಿ ಎಂದು ಬಗೆದಿದ್ದೆವು. ಏನಿಲ್ಲದಿದ್ದರೂ ನಿನಗೆ ಗೂಲಗೂಲ್(ನೀರನ್ನು ಹುದುಗಿಕೊಂಡಿರುವ ಮರ)ಗಳ ಪರಿಚಯವಿದೆ ಅಲ್ಲವೇ?''

"ಬೇಗನೇ ನೀರಿರುವ ಕಡೆ ತಲಪುತ್ತೇವೆ. ಅದೋ ಮುಂದೆ ನೋಡಿ, ನೀರು ಕಾಣುತ್ತಿದೆ." ಬುಲ್ಬೈ ಬುಲ್ಬೈ ಅವನು ಕೈತೋರಿಸಿದತ್ತ ನೋಡಿದರು. ನಿಜ. ಬಯಲಿನ ಆ ಕಡೆ ನೀರಿನ ಹಾಸು ಕಾಣುತ್ತಿತ್ತು. ಸರಸರ ನಡೆದರು. ಆದರೆ, ಅವರು ಮುಂದು ಮುಂದು ನಡೆದಂತೆ ನೀರು ಹಿಂದು ಹಿಂದಕ್ಕೆ ಹೋಗುತ್ತಿತ್ತು. ಅದನ್ನು ಮುಟ್ಟೇ ತೀರುತ್ತೇವೆ ಎಂಬ ಭರವಸೆಯಿಂದ ಅವರು ನಡೆದರು. ಬಯಲು ದಾಟುತ್ತಿದ್ದಂತೆ ಅವರಿಗೆ ಕಂಡದ್ದು ಕೆಲವು ಮರಗಿಡಗಳು ಮಾತ್ರ! ನೀರು ಮಾಯವಾಗಿತ್ತು.

ಸುಸ್ತಾಗಿದ್ದ ಹುಡುಗಿಯರು ಅಲ್ಲಿಯೇ ಕುಸಿದು ಬೀಳುತ್ತಿದ್ದರು. ಆದರೆ ವೀಡಾ, "ಮರಗಳ ಹಿಂದೆ ನೀರಿದೆ" ಎಂಬ ಭರವಸೆ ನೀಡಿದ. ಮತ್ತೆ ಅವರು ಪೊದೆಗಳ ಒಳಗೆ ತೂರಿಕೊಂಡು ಮತ್ತೊಂದು ಬಯಲಿಗೆ ಬಂದರು.

"ನಾನು ನಿಮಗೆ ಹೇಳಲಿಲ್ಲವೇ? ನೋಡಿ, ಅಲ್ಲಿ ನೀರು ಕಾಣುತ್ತಾ ಇದೆ."

ಹುಡುಗಿಯರು ಅತ್ತ ನೋಡಿದರು. ಮತ್ತೆ ಅಲ್ಲಿ ನೀರಿನ ಹಾಸು ಇತ್ತು. ಅವರಿಗೆ ವಿಶ್ವಾಸ ಮೂಡಿತು. ಉರಿಯುತ್ತಿದ್ದ ಬಿಸಿಲನ್ನು ಸಹಿಸಿಕೊಂಡು ಹೇಗೋ ನಡೆದರು. ಆದರೆ, ನಿರಾಶೆ ಅವರನ್ನು ಕಾದಿತ್ತು!

"ಸಾಕು ಇದು. ಸುಮ್ಮನೆ ಹಿಂತಿರುಗಿ ಹೋಗೋಣ. ಇದಾವುದೋ ದುಷ್ಟಶಕ್ತಿಗಳ ನಾಡು. ನೀರನ್ನು ನೋಡುತ್ತೇವೆ. ಆದರೆ, ಹತ್ತಿರ ಹೋದಾಗ ಬರಿ ಒಣ ಭೂಮಿ ಅಲ್ಲಿ. ಸಾಕಿದರ ಸಹವಾಸ. ನಮ್ಮ ಊರಿಗೆ ಹೋಗೋಣ.''

"ನಿಮ್ಮನ್ನು ಕೊಲ್ಲುವ ಬೀರೀಯನ್ನನ ಬಳಿಗೆ ಮತ್ತೆ ಹೋಗುತ್ತೀರಾ?"

"ಈ ದೆವ್ವಗಳ ನಾಡಿನಲ್ಲಿ ಬಾಯಾರಿಕೆಯಿಂದ ಸಾಯುವುದಕ್ಕಿಂತ ನಮ್ಮದೇ ನಾಡಿನಲ್ಲಿ ಬೂಂದಿಯ (ಒಂದು ಆಯುಧ) ಇರಿತದಿಂದ ಸಾಯುವುದು ಎಷ್ಟೋ ಲೇಸು! ನಾವಿನ್ನು ಹೋಗುತ್ತೇವೆ."

